ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1017 (961)

ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಉತ್ತರಿಸುವ ದಿನಾಂಕ : 29.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಹೆಗ್ಗೆರೆ ಹಳ್ಳಿಯಲ್ಲಿ ಪ್ರಕಾಶ್ ಸ್ಪಾಂಜ್ ಐರನ್ ಮತ್ತು ಪವರ್ ಪ್ರೈವೇಟ್ ಲಿಮಿಟೆಡ್ ಎನ್ನುವ ಕಾರ್ಖಾನೆ ಕಾರ್ಯಾಚರಣೆ ನಡೆಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ;	ಕಾರ್ಯಾಚರಣೆಯಲ್ಲಿರುತ್ತದೆ.
ಆ)	ಈ ಕಾರ್ಖಾನೆ ನಡೆಯುತ್ತಿರುವ ಗ್ರಾಮ ಕೈಗಾರಿಕಾ ವಲಯದ ಪರಿದಿಗೆ ಸೇರುತ್ತದೆಯೇ; ಇಲ್ಲಿ ಎಷ್ಟು ಸ್ಥಳೀಯ ಕಾರ್ಮಿಕರಿದ್ದಾರೆ; ಎಷ್ಟು ಹೊರರಾಜ್ಯದ ಕಾರ್ಮಿಕರಿದ್ದಾರೆ.(ವಿವರ ನೀಡುವುದು)	ಕರ್ನಾಟಕ ಭೂ ಕಂದಾಯ ನಿಯಮ 1994 ನಿಯಮ 107(1) ಭೂ ಪರಿವರ್ತನೆ ಮಾಡಿಕೊಂಡು ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದುಕೊಂಡು ಘಟಕವು ಕಾರ್ಯಾರಂಭಗೊಂಡಿರುತ್ತದೆ. ಘಟಕದ ಒಟ್ಟು 725 ಉದ್ಯೋಗಿಗಳಲ್ಲಿ, 467 ಸ್ಥಳೀಯರಿಗೆ ಉದ್ಯೋಗ ಒದಗಿಸಲಾಗಿರುತ್ತದೆ.
ಇ)	ಸದರಿ ಕಾರ್ಖಾನೆ ಹೊರಸೂಸುತ್ತಿರುವ ವಿಷ ವಾಯುವಿನಿಂದ ಸುತ್ತಮುತ್ತಲಿನ ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಂದಾಯ ಇಲಾಖೆಯ ವರದಿ ಲಗತ್ತಿಸಿದೆ.
ಈ)	ಸಾಮಾಜಿಕ ಹೊಣೆಗಾರಿಕೆಯಡಿ ಈ ಖಾಸಗಿ ಕಾರ್ಖಾನೆ ಪ್ರಾರಂಭವಾದ ದಿನದಿಂದ ಎಷ್ಟು ಜನಪರ ಮತ್ತು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಕಾರ್ಖಾನೆಯ ಸುತ್ತಮುತ್ತಲಿನ ಶಿಕ್ಷಣ, ಉದ್ಯೋಗ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಹಾಗೂ 2019ರಲ್ಲಿ ನೆರೆಹಾವಳಿ ಬಂದಂತಹ ಬೆಳಗಾವಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಮೂಲಸೌಕರ್ಯಕ್ಕಾಗಿ ರೂ.130.00 ಲಕ್ಷ ವ್ಯಯ ಮಾಡಲಾಗಿದೆ.

ಸಿಐ 268 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು